ಕುರಿತಾದ ಮರುಕ ಜಾಗೃತಗೊಳ್ಳುತ್ತಾ, ಮಿಕ್ಕಂತೆ ಅವಗಣನೆಗೆ ಗುರಿಯಾಗುತ್ತಾ, 'ವನಿತನಿಗೆ ಮದುವೆಯಾಗುತ್ತದೆಯಾ?' ಎನ್ನುವ ಪ್ರಶ್ನೆ ಭವಿಷ್ಯದ ನಿಗೂಢವಾಗಿರುವಾಗ, ಆಗಲೇ ನಡೆದಿದ್ದು ಈ ಘಟನೆ.

★★★

ಭಾಗ್ಯಲಕ್ಷ್ಮಿ ಕಲಿಸುತ್ತಿದ್ದ ಸ್ಕೂಲಿನಲ್ಲಿ ಅವತ್ತು ಶಾಲಾ ವಾರ್ಷಿಕೋತ್ಸವ. "ಆರು ಗಂಟೆಯ ಹೊತ್ತಿಗೆ ನೀನೂ ಬಾ. ಇಬ್ಬರೂ ಒಟ್ಟಿಗೆ ವಾಪಸ್ ಬಂದರಾಯ್ತು" ತಂಗಿಗೆ ಹೇಳಿಟ್ಟಿದ್ದಳು ಭಾಗ್ಯ. ಪ್ರತಿ ವರ್ಷ ಇಂತಾ ವಾರ್ಷಿಕೋತ್ಸವಕ್ಕೆ ಹಾಜರಿ ಹಾಕಿ ಮಕ್ಕಳ ಸಂಗೀತ, ನೃತ್ಯಗಳಲ್ಲಿ ಭಾಗಿಯಾಗುವುದು ವನಿತನಿಗೂ ಪ್ರಿಯ. ಒಪ್ಪಿಕೊಂಡಿದ್ದಳು ಅವಳು. ಆದರೆ ಹೀಗೆ ಒಪ್ಪಿಕೊಂಡ ವನಿತಾ ಕಾರ್ಯಕ್ರಮಕ್ಕೆ ಬರದೆ ಇದ್ದುದು ಭಾಗ್ಯನಿಗೆ ಒಂದಿಷ್ಟು ಆತಂಕ ತಂದಿದ್ದರೂ ತೀರಾ ಗಂಭೀರವಾಗಿ ಈ ವಿಷಯವನ್ನು ಅವಳು ಪರಿಗಣಿಸಿರಲಿಲ್ಲ. ಒಂಬತ್ತು, ಒಂಬತ್ತೂವರೆಯ ಹೊತ್ತಿಗೆ ಕಾರ್ಯಕ್ರಮ ಮುಗಿದು ಒಬ್ಬಂಟಿಯಾಗಿ ಮನೆಗೆ ಬಂದಳು ಭಾಗ್ಯ. ದಾರಿಯಲ್ಲಿ ಅಲ್ಲಲ್ಲಿ ಒಂಟಿ ಮನೆಗಳು. ಅವನ್ನು ದಾಟಿಕೊಂಡು ಮುಂದೆ ನಿರ್ಜನವಾದೆಡೆ ಬರುವಾಗ ಎದೆಯೊಳಗೆ ಹೆಚ್ಚಾಗುತ್ತಿದ್ದ ಢಬಢಬ. ಭಾಗ್ಯ ಉಣುಗೋಲಿನ ಹತ್ತಿರ ಬಂದಾಗ ನಾಯಿ ಬಾಲ ಅಲ್ಲಾಡಿಸಿಕೊಂಡು ಅವಳಿಗೆ ಸುತ್ತು ಹಾಕುತ್ತಾ ಏನೋ ದೂರು ಹೇಳುವಂತೆ ಕುಂಯ್ಗುಟ್ಟಿತು. ಮಾಮೂಲಿನಂತೆ ಅದರ ತಲೆ ಸವರಿ ಮುಂಬಾಗಿಲಿಗೆ ಬಂದು ಬಾಗಿಲು ತಟ್ಟಿದಳು ಭಾಗ್ಯ. ಬಾಗಿಲು ತೆಗೆದ ವನಿತಾ ಕಾರ್ಯಕ್ರಮಕ್ಕೆ ಹೊರಡಲು ಸಿದ್ಧವಾಗಿರುವವಳಂತೆ ಅಪರೂಪಕ್ಕೆ ಉಡುವ ಸೀರೆ ಉಟ್ಟಿದ್ದಳು. ಕೈಗಳಿಗೆ ಮ್ಯಾಚಿಂಗ್ ಬಳೆಗಳು. ಮುಡಿಯಲ್ಲಿ ಮಲ್ಲಿಗೆ ದಿಂಡು.

"ಹೊರಡೋಕೆ ರೆಡಿಯಾಗಿದ್ದಿ. ಮತ್ತ್ಯಾಕೆ ಬರ್ಲಿಲ್ಲ?" ಕೇಳಿದಳು ಭಾಗ್ಯ.

"ತಲೆನೋವು ಶುರುವಾಯ್ತು. ಬರೋದು ಬೇಡ ಅನ್ನಿಸ್ತು..."

"ಸ್ವಲ್ಪ ಹೊತ್ತು ಗಾಳಿಗೆ ಬಂದಿದ್ರೆ ಎಲ್ಲಾ ಸರಿಯಾಗ್ತಿತ್ತು..."

ಅಕ್ಕನ ಮಾತು ಕೇಳಿ ಉಗುಳು ನುಂಗಿಕೊಂಡಳು ವನಿತಾ. ಗಾಳಿಗೆ ಬಂದಿದ್ದಕ್ಕೇ ಕೆಟ್ಟ ಅನುಭವ ಹಿಂಬಾಲಿಸಿಕೊಂಡು ಬಂದಿತ್ತು. ಜೊತೆಗೆ ಹಿಂಬಾಲಿಸಿಕೊಂಡು ಬಂದಿತ್ತು ತುತ್ತು ಅನ್ನಕ್ಕೆ ಭಾಜನವಾಗಿದ್ದ ಯಃಕಶ್ಚಿತ್ ನಾಯಿ. 'ಹಚ... ಹಚಾ...' ಎಂದು ಓಡಿಸಲು ಪ್ರಯತ್ನಿಸಿ ವಿಫಲಳಾಗಿದ್ದಳು ವನಿತಾ. ಇಲ್ಲದಿದ್ದರೆ ಗತಿ ಏನಾಗುತ್ತಿತ್ತೋ? ಸಂದರ್ಭಕ್ಕೆ ಹೊಂಚು ಹಾಕಿ ಹಿಂಬಾಲಿಸಿದವನ ಮೀನಖಂಡಕ್ಕೆ ಬಾಯಿ ಹಾಕಿ ಅಲುಬಿಬಿಟ್ಟಿತ್ತು ನಾಯಿ. 'ಸತ್ತೆನೋ, ಕೆಟ್ಟೆನೋ...' ಎಂದು ಕುಂಟುತ್ತಾ ಓಡಿ ಹೋಗಿದ್ದ ಪಾಪಾತ್ಮ. ಮತ್ತೆ ಮುಂದೆ ಹೋಗಲು ಧೈರ್ಯ ಬರದೆ ವಾಪಸು ಮನೆಗೆ ಓಡೋಡಿಕೊಂಡು ಬಂದು ಬಾಗಿಲು ಮುಚ್ಚಿಕೊಂಡಿದ್ದ ವನಿತಾ ಅಕ್ಕನ ಜೊತೆ ಊಟಕ್ಕೆ ಕೂತಾಗ ಮೈ ಚಳಿ ಬಿಟ್ಟು ಕೇಳಿದಳು, "ಅಕ್ಕಾ, ನಂಗೆ ಮದುವೆ ಮಾಡಲ್ವಾ?"

## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.